**<u>ಮಾನ್ಯ ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾ ದಂ. ನ್ಯಾಯಾಲಯ ಮುಂಡರಗಿ</u>**

**<u>ಸಿ.ಸಿ.ನಂ.521/2022</u>**

**ಸರಕಾರಃ** ಮುಂಡರಗಿ ಪೋಲಿಸ್ ಠಾಣೆ

ವಿರುದ್ಧ

**ಆರೋಪಿಃ** ಶಂಕರಗೌಡ ತಂದೆ ಭೀಮನಗೌಡ ಗೌಡರ,
ವಯಾಃ 48 ವರ್ಷ, ಉಃ ಕೆ.ಎಸ್.ಆರ್.ಟಿ.ಸಿ ಬಸ್ ಚಾಲಕ,
ಸಾಃ ಅನಪಕಟ್ಟಿ ತಾಃ ಹುನಗುಂದ, ಹಾಲಿಃ ಬೈಲಕುಲ,
ತಾಃ ಮುದ್ದೇಬಿಹಾಳ, ಜಿಃ ವಿಜಯಪುರ.

**ನಾನು ಶ್ರೀಮತಿ. ಜ್ಯೋತಿ ಬಿ ಕಾಗಿನಕರ**, ಬಿ.ಎಸ್‌ಸಿ, ಎಲ್ ಎಲ್. ಬಿ, **ದಿವಾಣಿ ನ್ಯಾಯಾಧೀಶರು ವ, ಜೆ ಎಂ ಎಫ್ ಸಿ ಮುಂಡರಗಿ**

ಆರೋಪಿತರಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ

ದಿಃ 13.04.2022 ರಂದು 13.30 ಗಂಟೆಯ ಸುಮಾರಿಗೆ ಮುಂಡರಗಿ ಪೋಲಿಸ್ ಠಾಣಾ ಹದ್ದಿಯಲ್ಲಿ ಬರುವ ಮುಂಡರಗಿ-ಗದಗ ರಾಜ್ಯ ಹೆದ್ದಾರಿಯ ಡಾಂಬರ್ ರಸ್ತೆಯ ಹೊಸ ಡಂಬಳ ಸಮೀಪ ಇರುವ ಹೊಸಪೇಟೆ ಇವರ ಇಟ್ಟಂಗಿ ಬಟ್ಟಿಯ ಹತ್ತಿರ ಸಾರ್ವಜನಿಕ ಡಾಂಬರ್ ರಸ್ತೆಯ ಮೇಲೆ ಆರೋಪಿಯಾದ ನೀವು ಕೆ.ಎಸ್.ಆರ್.ಟಿ.ಸಿ ಬಸ್ ನಂ.ಕೆಎ-26/ಎಫ್-0979 ನೇದ್ದನ್ನು ಗದಗ ಕಡೆಯಿಂದ ಮುಂಡರಗಿ ಕಡೆಗೆ ಅತೀ ವೇಗ ವ ನಿರ್ಲಕ್ಷತನದಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದಿದ್ದು, **ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಅಂತಾ ಆರೋಪಿಸಲಾಗಿದೆ.**

ಎರಡನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಕೆ.ಎಸ್.ಆರ್.ಟಿ.ಸಿ ಬಸ್ ನಂ. ಕೆಎ-26/ಎಫ್-0979 ನೇದ್ದನ್ನು ಗದಗ ಕಡೆಯಿಂದ ಮುಂಡರಗಿ ಕಡೆಗೆ ಅತೀ ವೇಗ ವ ನಿರ್ಲಕ್ಷತನದಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಗೌಸ್‌ಮೋದಿನ ಶಾಬುದ್ದೀನ್ ನದಾಫ ಇವರು ತಮ್ಮ ಮೋಟರ್ ಸೈಕಲ್ ನಂ.ಕೆಎ-50/ಕ್ಯೂ-3009 ನೇದ್ದರ ಹಿಂದೆ ಅಬ್ದುಲ್ ಕರೀಂಸಾಬ ಮದರಸಾಬ ಹೊಂಬಳ ಇವರನ್ನು ಕೂಡಿಸಿಕೊಂಡು ಹೊಸಪೇಟಿ ಇವರ ಇಟ್ಟಂಗಿ ಬಟ್ಟಿಯ ಕಡೆಯಿಂದ ಮುಂಡರಗಿ-ಗದಗ ರಸ್ತೆಯ ಕಡೆಗೆ ಬರುತ್ತಿರುವಾಗ ಆರೋಪಿಯಾದ ನೀವು ಇವರ ಮೋಟರ್ ಸೈಕಲ್‌ಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿದ್ದು, ಮೋಟರ್ ಸೈಕಲ್ ಸವಾರನು ಹಾಗೂ ಹಿಂಬದಿ ಕುಳಿತ

ಅಬ್ದುಲ್ ಕರೀಂಸಾಬ ಮದರಸಾಬ ಹೊಂಬಳ ಈ ಇಬ್ಬರೂ ಪುಟಿದು ರಸ್ತೆಯ ಮೇಲೆ ಬಿದ್ದು, ಅಬ್ದುಲ್ ಇವರಿಗೆ ಹಿಂದೆಲೆಗೆ ಮತ್ತು ಬಲ ಹಣೆಗೆ ತೀವ್ರ ಸ್ವರೂಪ ಪೆಟ್ಟಾಗಿದ್ದು ಮತ್ತು ಬಲಮುಂಗೈಗೆ ಗಾಯವಾಗಿದ್ದು ಹಾಗೂ ಮೋಟರ್ ಸೈಕಲ್ ಸವಾರನಾದ ಗೌಸ್‌ಮೋದಿನ್ ಇವರ ಬಲ ಮೊಣಕಾಲ ಕೆಳಗೆ ಎಲುಬು ಮುರಿದು ಅಲ್ಲಲ್ಲಿ ಪೆಟ್ಟು ಗಾಯಗಳಾಗಿದ್ದು, **ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 338 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಅಂತಾ ಆರೋಪಿಸಲಾಗಿದೆ.**

ಕೊನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಚಲಾಯಿಸುತ್ತಿದ್ದ ಕೆ.ಎಸ್.ಆರ್.ಟಿ.ಸಿ ಬಸ್ ನಂ.ಕೆಎ–26/ಎಫ್–0979 ನೇದ್ದನ್ನು ಗದಗ ಕಡೆಯಿಂದ ಮುಂಡರಗಿ ಕಡೆಗೆ ಅತೀ ವೇಗ ವ ನಿರ್ಲಕ್ಷತನದಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಮೋಟರ್ ಸೈಕಲ್ ನಂ.ಕೆಎ–50/ಕ್ಯೂ–3009 ನೇದ್ದಕ್ಕೆ ಡಿಕ್ಕಿ ಪಡಿಸಿ ಅಪಘಾತ ಮಾಡಿ ಮೋಟರ್ ಸೈಕಲ್ ಸವಾರನಿಗೂ ಹಾಗೂ ಹಿಂಬದಿಯಲ್ಲಿ ಕುಳಿತ ಅಬ್ದುಲ್ ಕರೀಂಸಾಬ ಮದರಸಾಬ ಹೊಂಬಳ ಇವರಿಗೆ ಭಾರಿ ಸ್ವರೂಪದ ಗಾಯ ಪಡಿಸಿದ್ದು, ಸದರಿ ಅಪಘಾತದಲ್ಲಿ ಭಾರಿ ಗಾಯಗೊಂಡಿರುವ ಅಬ್ದುಲ್ ಕರೀಂಸಾಬ ಮದರಸಾಬ ಹೊಂಬಳ ಇವರನ್ನು ಹೆಚ್ಚಿನ ಉಪಚಾರಕ್ಕೆ ಅವರ ಮನೆಯವರು ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅಲ್ಲಿಯ ವೈದ್ಯಾಧಿಕಾರಿಗಳು ಪ್ರಥಮೋಪಚಾರ ಮಾಡಿ ಹೆಚ್ಚಿನ ಉಪಚಾರಕ್ಕೆ ಮುಂದೆ ಕರೆದುಕೊಂಡು ಹೋಗುವಂತೆ ಹೇಳಿದ್ದರಿಂದ ಅಬ್ದುಲ್ ಕರಿಂಸಾಬ ಇವರ ಮನೆಯವರು ಹುಬ್ಬಳ್ಳಿ ತತ್ವದರ್ಶ ಆಸ್ಪತ್ರೆಗೆ ದಾಖಲಿಸಿದಾಗ ಅಬ್ದುಲ್ ಕರಿಂಸಾಬ ಇವರಿಗೆ ಉಪಚಾರ ಫಲಿಸದೇ ದಿನಾಂಕಃ 16.04.2022 ರಂದು ಮುಂಜಾನೆ 10.27 ಗಂಟೆಗೆ ಸದರಿ ಆಸ್ಪತ್ರೆಯಲ್ಲಿ ಮರಣ ಹೊಂದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಅಂತಾ ಆರೋಪಿಸಲಾಗಿದೆ.

ಮೇಲ್ಕಂಡ ಅಪರಾಧಗಳು ನನ್ನ ಕಾರ್ಯ ಕಕ್ಷೆಯಲ್ಲಿ ಎಸಗಿರುವುದರಿಂದ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತೇವೆ.

**ಸಹಿ/-**

**ದಿಃ 01.03.2023** **ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ, ಮುಂಡರಗಿ**

**ಆರೋಪಣೆ**

ಪ್ರಶ್ನೆ:-1 ಈಗ ಓದಿ ತಿಳಿಸಿದ ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಾ ತಿಳಿಯಿತಾ?

ಉತ್ತರಃ ಹೌದು

ಪ್ರಶ್ನೆ:-2 ನಿಮ್ಮ ಮೇಲೆ ಮಾಡಿದ ದೋಷಾರೋಪಣೆಗೆ ಸಮ್ಮತಿಸಿ ನಿಮ್ಮ ತಪ್ಪನ್ನು ಒಪ್ಪಿ ಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೆಂದು ಕೇಳುವಿರೋ?

ಉತ್ತರಃ ವಿಚಾರಣೆ ಆಗಬೇಕು

(ಈ ಮೇಲಿನ ಆಪಾದನೆಯನ್ನು ಆರೋಪಿಗೆ ಒದಿ ಹೇಳಿ ವಿವರಿಸಿದ್ದು ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಡೀಕರಿಸುತ್ತೇನೆ)

**ಸಹಿ/-**

**ದಿಃ 01.3.2023** **ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ, ಮುಂಡರಗಿ**

**ಆರೋಪಿ ಸಹಿ**